ಶಿಕಾರಿಪುರ ನಗರದ ಪ್ರಥಮ ದರ್ಜಿ ಕಾಲೇಜಿನ ಕಟ್ಟಡ

13 - ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿಕಾರಿಪುರ ಸರ್ಕಾರಿ ಪ್ರಥಮ ದರ್ಜಿ ಕಾಲೇಜಿನ ಕಟ್ಟಡದ 2ನೇ ಹಂತ ಕಾಮಗಾರಿ ಪೂರ್ಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಕಟ್ಟಡವನ್ನು ಪೂರ್ಣಗೊಳಿಸಿ ವಿದ್ಯಾರ್ಥಿ: ವಿದ್ಯಾರ್ಥಿನಿಯರಿಗೆ ಕೊಠಡಿಗಳಿಲ್ಲದೆ ತೊಂದರೆಯಾಗಿರುವುದನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? ಹಾಗೂ ಕಟ್ಟಡವನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಶಿಕಾರಿಪುರ ಸರ್ಕಾರಿ ಪ್ರಥಮ ದರ್ಜಿ ಕಾಲೇಜಿನ ಕಟ್ಟಡದ ಮೊದಲನೇ ಹಂತದ ಕಾಮಗಾರಿಯು ರೂ. 20.67ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ಇಲ್ಲಿಯವರೆವಿಗೆ 15.32 ಲಕ್ಷ ರೂ.ಗಳನ್ನು ನವೆಂಬರ್ 94ರ ಅಂತ್ಯದವರೆವಿಗೆ ಖರ್ಚು ಮಾಡಲಾಗಿದೆ. ಈ ಮೊದಲನೆ ಹಂತದ ಕಾಮಗಾರಿಯು ಸಂಪೂರ್ಣವಾಗಿ ಮುಗಿದ ಮೇಲೆ ಎರಡನೇ ಹಂತದ ಕಾಮಗಾರಿಯನ್ನು ಆರ್ಥಿಕ ಅನುಕೂಲತೆ ಪರಿಗಣಿಸಿ ಆಯವ್ಯಯ ದೊರಕಿದರೆ ಮಾತ್ರ ಕೈಗೆತ್ತಿಕೊಳ್ಳಲು ಸಾಧ್ಯವಾಗುವುದು.

ಇ) 1994-95ರಲ್ಲಿ ಈ ಕಾಮಗಾರಿಗೆ ರೂ. 2.00 ಲಕ್ಷ ಒದಗಿಸಿದ್ದು 1995-96ರ ಸಾಲಿನಲ್ಲಿಯೂ 3.00 ಲಕ್ಷ ರೂ.ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಹೇಳಿರುವಂತೆ ಆರ್ಥಿಕ ಅನುಕೂಲತೆಯನ್ನಾಧರಿಸಿ ಕಟ್ಟಡವನ್ನು ಪೂರ್ಣಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಬೆಂಗಳೂರಿನ ಎಸ್.ಡಿ. ಸ್ಯಾನಿಟೋರಿಯಂ ಅನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡುವುದು.

337 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಂಗಳೂರಿನ ಎಸ್.ಡಿ. ಸ್ಯಾನಿಟೋರಿಯಂನಲ್ಲಿ ಔಷಧ ಹಾಗೂ ಉಪಕರಣ ಇತ್ಯಾದಿ ಸೌಕರ್ಯಗಳಿಗಾಗಿ 1994-95ರಲ್ಲಿ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು?*

ಆ) *ಈ ಸ್ಯಾನಿಟೋರಿಯಂಗೆ ಕೇಂದ್ರ ಸರ್ಕಾರದಿಂದ 1994-95ರಲ್ಲಿ ಬಂದರುವ ಹಣಕಾಸಿನ ನೆರವೆಷ್ಟು?*

ಇ) *ಕಿಡ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಹಾಗೂ ಜಯದೇವ ಹೃದ್ರೋಗ ಆಸ್ಪತ್ರೆಯ ರೀತಿಯಲ್ಲಿ ಈ ಸಾನಿಟೋರಿಯಂನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?*

ಈ) *ಹಾಗಿದ್ದಲ್ಲಿ, ಈ ವರೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) **ಔಷಧಿಗಳು**

1) ನೇತ ಖರೀದಿ ರೂ. 11,91,158-00